

ಸಂತ ಕವಿ ಕನಕದಾಸರ

# ನಳದಮಯಂತಿ

ಪ್ರೇಮ ಕತೆ



ಡಾ.ಜಿ. ಕೃಷ್ಣಪ್ಪ

## ಮದನನ ಮೊನೆಯಲಗಿನಲಿ ಬಳಲ್ವ ಸತಿಯನು ಕಂಡುದೌ ಹಂಸೆ

ನವರತ್ನಗಳಲ್ಲಿ ಒಂದಾದ ಇಂದ್ರನೀಲಗಳಿಂದ ಮಾಡಿದ ಗೋಡೆ, ವಜ್ರದಿಂದ ರಚಿಸಿರುವ ಸಾಲುಗಂಭಗಳು, ಪಚ್ಚೆ ಹಲಗೆಯ ಮೇಲೆ ಮುತ್ತಿನ ಚಾವಣಿಯ ಚೌಕಟ್ಟು, ಹವಳದಿಂದ ಕೆತ್ತಿದ ಬೋದಿಗೆ, ತೊಲೆಯನ್ನು ನಿಲ್ಲಿಸಲು ಸಾಲು ಮಣಿಗಳಿಂದ ನಿರ್ಮಿಸಿದ ಮಂಟಪದಲ್ಲಿರುವ ಮಂಚದ ಮೇಲೆ ನಳನ ಚಿಂತೆಯಲ್ಲಿರುವ ದಮಯಂತಿಯನ್ನು ಹಂಸ ನೋಡಿತು. ಅವಳು ಚಂದ್ರನಂತಹ ಹಣೆಯುಳ್ಳವಳಾಗಿ ಕಸ್ತೂರಿಯ ತಿಲಕವಿಟ್ಟಿದ್ದಳು. ಮುತ್ತಿನ ಹಾರ ಧರಿಸಿ ರತ್ನ ಖಚಿತ ಉಂಗುರ, ಬಂಗಾರದ ಬಳೆಗಳನ್ನು ಹಾಕಿಕೊಂಡಿದ್ದಳು. ಬಗೆ ಬಗೆಯ ನಿರಿಹಿಡಿದ ಸೀರೆಯುಟ್ಟು ಕಾಲಂದಿಗೆಯಲ್ಲಿ ಸೌಂದರ್ಯದ ಖನಿಯಾಗಿದ್ದಳು. ಅವಳ ಸುತ್ತಲೂ ತರುಣಿಯರು ಸುತ್ತುವರೆದಿದ್ದರು.

ಕವಿದ ಕಪ್ಪಾದ ಮೋಡದಲ್ಲಿ ಹೊಳೆ ಹೊಳೆಯುವ ಮಿಂಚಿನ ಬಳಗವೆಂಬಂತೆ ಹಂಸೆಗಳು ನಭದಿಂದ ಇಳಿದು ಬಂದು, ಆ ಲಲನೆಯರ ಸಭಾಮಂಡಲದಲ್ಲಿ ಕುಳಿತವು. ನಳಿನ ಲೋಚನೆ ದಮಯಂತಿಯ ಕಣ್ಣಿಗೆ ನಳನಿಂದ ಬಂದಿರುವ ಹಂಸ ಕಂಡಿತು. ಅವಳು ತನ್ನ ಸಖಿಯರನ್ನು ನೋಡುತ್ತ ಅದರ ಚೆಲುವನ್ನು ಬಣ್ಣಿಸಿದಳು. ಅದನ್ನು ಹಿಡಿಯಬೇಕೆಂದು ಮನಸ್ಸಾಗಿ ಅದರ ಚಲನವಲನವನ್ನು ಗಮನಿಸಿದಳು. ಮೆಲ್ಲ ಮೆಲ್ಲನೆ ಹೆಜ್ಜೆ ಇಡುತ್ತ ಅದನ್ನು ಹಿಡಿಯಲು ತನ್ನ ಚಿಗುರಂತಿರುವ ಕೈಗಳನ್ನು